# ಗೀಜಗ

■ ಹೊರೆಯಾಲ ದೊರೆಸ್ವಾಮಿ

ಸಾಲು ಗೊಬ್ಬಳಿ ಮರದ
ಮೇಲು ಕೊಂಬೆಯ ಮೇಲೆ
ಗೀಜುಗ ಗೂಡು ಕಟ್ಟಿತ್ತಾ!

ಸೀಮೆ ಸೀಮೆಗೆ ಹೋಗಿ
ಸಾಮೆ ಹುಲ್ಲನು ತಂದು
ಸರಸದಿ ಗೂಡು ಸವೆಸಿತ್ತಾ!

ರಾಗಿ ಕಣಿವೆಗೆ ಹೋಗಿ
ಜೇಗಿ ಹುಲ್ಲನು ತಂದು
ಬೀಗುತ ಗೂಡು ಬಿಡಿಸಿತ್ತಾ!

ಗದ್ದೆ ಬಯಲಿಗೆ ಹೋಗಿ
ಬಿದ್ದ ಹುಲ್ಲನು ತಂದು
ಮುದ್ದು ಗೂಡನ್ನು ನೇಯ್ದಿತ್ತಾ!

ಬತ್ತದ ಬಣವೆ ಏರಿ
ಮೆತ್ತನೆ ಹುಲ್ಲನು ತಂದು
ಮುತ್ತಿನ ಗೂಡನು ಹೆಣೆದಿತ್ತಾ!

ಅಂದ ಚಂದದ ಗೂಡು
ಬಂಧ ಬೆಡಗಿನ ಗೂಡು
ಕಂಡು ಸುಮ್ಮಾನದಿ ನಲಿದಿತ್ತಾ!

ಬೀಸು ಗಾಳಿಗೆ ಬಳುಕಿ
ತೂಗು ಗೂಡಲಿ ಕುಲುಕಿ ತನ್ನ
ಬಳಗದ ಒಡಗೂಡಿ

ಗೀಜುಗ
ಮೋಜಿನುಯ್ಯಾಲೆಯ ಆಡಿತ್ತಾ
ಸುಯ್ಯೆಂದು ಸುತ್ತಲು ಸುಳಿದಿತ್ತಾ!

■



ಶಶಿಧರ ಹಳೇಮನಿ

# ಯಾರಮ್ಮ ಈ ಗುಮ್ಮ?

■ ಮ.ಗು. ಬಸವಣ್ಣ ನಂಜನಗೂಡು



ಅಮ್ಮ ಅಮ್ಮಾ, ಅಪ್ಪನೂ
ಎಲ್ಲೂ ಹೋಗ್ತಿಲ್ಲ
ಸುಮ್ಮನೆ ಮನೆಯಲೇ
ಇರುವಿರಿ ಯಾಕಮ್ಮ?

ಮಿಸ್ಸು ನಮಗೆ ಹೇಳಿಹರಮ್ಮ
'ಮನೆಯನು ಬಿಟ್ಟು ಎಲ್ಲೂ
ಹೊರಗೆ ಹೋಗದಿರೆಂದು'
ನೀನೂ ಹಾಗೆಯೇ ಹೇಳುವೆಯಮ್ಮ

ಗುಮ್ಮನ ಕಂಡರೆ ನಿಮಗೂ
ಭಯವೇ ಹೇಳಮ್ಮ!
ಯಾರಮ್ಮಾ ಈ ಹೊಸ ಗುಮ್ಮ?!
ಗೆಳೆಯರೊಟ್ಟಿಗಾಡದೆ ಹೇಗಿರಲಮ್ಮ

ಕಾರಣವೇನು ಹೇಳಮ್ಮ
ಯಾರವನು ಈ ಗುಮ್ಮ?
ಗುಸುಪಿಸು ಮನೆಯಲೆ ಕೂತು
ಹಗಲುರಾತ್ರಿ ಅವನದೆ ಮಾತು

ದೊಡ್ಡವರಿಗೂ ಭಯವೇನಮ್ಮ?
ಅಷ್ಟು ದೊಡ್ಡವನೇ ಈ ಗುಮ್ಮ?
ಇಲ್ಲಿಗೆ ಯಾಕೆ ಬಂದ ಗುಮ್ಮ
ಯಾವಾಗ ತೊಲಗುವನು ಹೇಳಮ್ಮ

ಮಗೂ, ಅಂತಿಂಥವನಲ್ಲ ಈ ಗುಮ್ಮ
ಕಣ್ಣಿಗೆ ಕಾಣದ ಗಂಡೆತಿಮ್ಮ
ಗೊತ್ತಿಲ್ಲ ಕಂದ, ಗೊತ್ತಿಲ್ಲ ಯಾವಾಗ?
ಎಲ್ಲಿ?ಹೇಗೆ ಬರ್ತಾನೋ ಗೊತ್ತಿಲ್ಲ !

ಮನೆಯಲ್ಲೇ ಇದ್ದವರತ್ತ
ಸುಳಿಯುವುದಿಲ್ಲ
ಹಾದಿಬೀದಿಯಲಿ
ಅಡ್ಡಾಡುವವರ ಬಿಡುವುದೇ ಇಲ್ಲ!

ಅಂತಿಂಥವನಲ್ಲ ಈ ಗುಮ್ಮ
ಕಣ್ಣಿಗೆ ಕಾಣದ ಗಂಡೆತಿಮ್ಮ
ಮನೆಯಲ್ಲೇ ಆಟವ ಆಡೋಣ
ಎಲ್ಲ ಸೇರಿ ಕೊರೊನಾ ಗೆಲ್ಲೋಣ!

■

ಮಂಜುನಾಥ ಹುಲಕೊಪ್ಪದ